**ದಿನಾಂಕಃ 08–02–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಸಿ.ಎಸ್. ವಕೀಲರಿಂದಃ**

ದಾವಾ ಅನುಸೂಚಿತ ಎ ಯಿಂದ ಡಿ ಮತ್ತು ಎಫ್ ಆಸ್ತಿಯು ಮೊದಲು ಸಿಟಿಎಸ್ ನಂ. 1306/ಎ2 ರ ಆಸ್ತಿ ಆಗಿದ್ದವು ಎಂದರೆ ಸರಿಯಲ್ಲ, 1306/ಎ/2 ಎ ನೇದ್ದರ ಭಾಗದ ಆಸ್ತಿಗಳು ಆಗಿದ್ದವು ಎಂದು ಹೇಳುತ್ತಾರೆ. ಅವು ನಂತರ 1306/2 ಎ, 2 ಬಿ, 2 ಸಿ, 2 ಡಿ, 2 ಇ ಎಂದು ಪೌಡಿ ಆದವು ಎಂದರೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಮುಂದುವರೆದು ಸದರಿ ಆಸ್ತಿಯು 2 ಎಫ್ ಮತ್ತು 2 ಜಿ ಎಂದು ಪೌಡಿ ಆಗಿದೆ ಎಂದರೆ 2 ಜಿ ದಾರಿಗೆ ಬಿಡಲಾಗಿದೆ ಎಂದು ಹೇಳುತ್ತಾರೆ. ಅವು ಯಾವಾಗ ಪೌಡು ಆದವು ಎಂದು ನನಗೆ ಹೇಳಲಾಗುವುದಿಲ್ಲ. ನಾನು ಹಾಜರು ಪಡಿಸಿದ ದಾಖಲೆ ಪ್ರಕಾರ 1980 ರಲ್ಲಿ ಪೌಡು ಆಗಿದೆ ಎಂದರೆ ಸರಿಯಲ್ಲ. ಅಂದರೆ ಪೌಡು ಆಗಿರುವುದು ಸುಳ್ಳು ಇರುತ್ತದೆ. 1306/2 ಸಿ ಮೊದಲು ಮಲ್ಲವ್ವ ಮುದ್ದಣ್ಣನವರ ಹೆಸರೆ ಇದ್ದು ಅವರು ಮೃತ ಪಟ್ಟ ನಂತರ ನಮ್ಮ ತಂದೆಯ ಹೆಸರಿಗೆ ವಾರಸು ಬದಲಾವಣೆ ಆಗಿರುತ್ತದೆ. 1306/ಎ/2 ಎ ಆಸ್ತಿಯು ನನ್ನ ತಂದೆಯ ಹೆಸರಿಗೆ ಇರುತ್ತದೆ. ಅದು ಸುಮಾರು 40 ವರ್ಷದ ಹಿಂದೆ ಬದಲಾವಣೆ ಆಗಿರುತ್ತದೆ. 1306/ಎ/2 ಡಿ ಆಸ್ತಿಯು ನನ್ನ ತಂದೆಯ ಹೆಸರಿಗೆ ಇರುತ್ತದೆ. ಅದು ಸುಮಾರು 40 ವರ್ಷದ ಹಿಂದೆ ಬದಲಾವಣೆ ಆಗಿರುತ್ತದೆ. 1306/ಎ/2 ಬಿ ಮತ್ತು 1306/ಎ/2 ಇ ಆಸ್ತಿಯು ಪಾಂಡರಂಗ ಖಂಡೆಪ್ಪ ಮುದ್ದಣ್ಣನವರ ಹೆಸರಿಗೆ ಇರುತ್ತದೆ. ಅವರ ಹೆಸರಿಗೆ 1980 ರಲ್ಲಿ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾವು ಚಿಕ್ಕವರಿದ್ದಾಗ ಅವರು ಖೊಟ್ಟಿಯ ರೀತಿಯಲ್ಲಿ ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ಅದನು ಪ್ರಶ್ನಿಸಿ ನಮ್ಮ ತಂದೆ ಆಗಲಿ ನಾವಾಗಲಿ ಎಲ್ಲಿಯಾದರೂ ವ್ಯಾಜ್ಯ ಮಾಡಿದ್ದಿರಾ ಎಂದರೆ ಸಾಕ್ಷಿಯು ಆ ವಿಷಯ ತಿಳಿದ ತಕ್ಷಣ ಈ ದಾವೆ ಮಾಡಿರುತ್ತೇವೆ ಎಂದು ಹೇಳುತ್ತಾರೆ.

1306/ಎ/2 ಎ, 1306/ಎ/2 ಸಿ, 1306/ಎ/2 ಡಿ ಆಸ್ತಿಗಳನ್ನು ನಾನು ವಹಿವಾಟು ಮಾಡುತ್ತಿದ್ದೇನೆ ಎಂದರೆ ನಿಜ. 1306/ಎ/2 ಬಿ ಮತ್ತು 1306/ಎ/2 ಇ ಆಸ್ತಿಯು ಪಾಂಡುರಂಗಪ್ಪನವರ ಹೆಂಡತಿ-ಮಕ್ಕಳು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 1306/ಎ/2 ಬಿ ಆಸ್ತಿ ಪಾಂಡುರಂಗಪ್ಪನವರ ಹೆಂಡಎತಿ ಆಸ್ತಿ ಮಾಡುತ್ತಿದ್ದಾರೆ 1306/ಎ/2 ಇ ನಮ್ಮ ಹೆಸರಿಗೆ ಇರುತ್ತದೆ ಎಂದು ಹೇಳುತ್ತಾರೆ. ನಿಪಿ-7 ರಲ್ಲಿ ಪಾಂಡುರಂಗಪ್ಪ ಮೃತನಂತರ ಅವರ ಹೆಂಡತಿ-ಮಕ್ಕಳ ಹೆಸರಿಗೆ ಪೌತಿ ವಾರಸು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನಮಗೆ ಗೆತ್ತಿಲ್ಲದ ಹಾಗೇ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಈ ಆಸ್ತಿಗಳು 1980 ರಲ್ಲಿ ಪಾಲುವಿಭಾಗ ಆದ್ದರಿಂದ 2 ಎ ಯಿಂದ 2 ಜಿ ವರೆಗೆ ಪೌಡಿ ಆದವು ಎಂದರೆ ಸರಿಯಲ್ಲ. ಸದರಿ ಹಿಸ್ಸೆಯ ಪ್ರಕಾರ ವರ್ತನೆ ಮಾಡಿ ಅವರಿಗೆ ಬಂದ ಹಿಸ್ಸೆ ಬಂದ ಪ್ರಕಾರ ಅವರವರು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಿ.ಟಿ.ಎಸ್. 344/ಎ ಮತ್ತು 344 ಬಿ ಆಸ್ತಿಗಳು 344 ರ ಭಾಗದ ಆಸ್ತಿಗಳು ಎಂದರೆ ನಿಜ. ಈ ಆಸ್ತಿಗಳು ಎ ಮತ್ತು ಬಿ ಎಂದು ಸುಮಾರು 40 ವರ್ಷದ ಹಿಂದೆ ಭಾಗ ಆಗಿರುತ್ತವೆ. ಎ ಮತ್ತು ಬಿ ಆಸ್ತಿಗಳು ಚಂದ್ರಶೇಖರಪ್ಪ ಮುದ್ದಣ್ಣನವರ ಹೆಸರಿಗೆ ಆಗಿರುತ್ತದೆ. 344 ಬಿ ಆಸ್ತಿ ಪಾಂಡುರಂಗಪ್ಪ ಮುದ್ದಣ್ಣನವರ ಹೆಸರಿಗಿದ್ದು ಅವರ ಪೌತಿ ನಂತರ ಅವರ ಮಕ್ಕಳ ಹೆಸರಿಗೆ ಆಗಿದೆ ಎಂದರೆ ನಮಗೆ ಗೊತ್ತಿರುವುದಿಲ್ಲ. 1980 ರಲ್ಲಿ ಈ ಆಸ್ತಿಗಳು ಹಿಸ್ಸೆ ಆಗಿರುವ ವಿಷಯ ನಮಗೂ ಮತ್ತು ನಮ್ಮ ತಂದೆಯವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.1306/6 ಎಫ್ ಆಸ್ತಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಾಗಲೇ ಪಾಲು ವಿಭಾಗ ಆಗಿದ್ದರಿಂದ ಮತ್ತೊಮ್ಮೆ ಪಾಲು ಹೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 6 ರಿಂದ 10 ಲೈಸನ್ಸ ಅನ್ವಯ ಆಸ್ತಿ ಸ್ವಾಧೀನ ಹೊಂದಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹೊಂದಿರುವುದಿಲ್ಲ. ಈ ರೀತಿಯಾದ ಲೈಸನ್ಸನ್ನು 40 ವರ್ಷದ ಹಿಂದೆ ಕೊಟ್ಟಿರುತ್ತಾರೆ. ನನ್ನ ಅಜ್ಜರವರು ನನ್ನ ತಂದೆಯವರಿಗೆ ಆಸ್ತಿಯನ್ನು ಲೈಸನ್ಸ್ ಆಗಿ ಕೊಟ್ಟಿರುತ್ತಾರೆ. ಆ ಬಗ್ಗೆ ಎಲ್ಲಿ ವ್ಯವಹಾರ ಆಗಿತ್ತು, ಎಷ್ಟಕ್ಕೆ ಆಗಿತ್ತು ಎಂದು ನನಗೆ

ಗೊತ್ತಿರುವುದಿಲ್ಲ. ಆ ರೀತಿ ಯಾವುದೇ ವ್ಯವಹಾರ ಆಗಿರುವುದಿಲ್ಲ, ನಮ್ಮ ದಾವೆಗೆ ಅನುಕೂಲವಾಗಲಿ ಎಂದು ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನಗಾಲಿ ನಮ್ಮ ತಂದೆಯವರಿಗೆ ಎಷ್ಟೆ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ_ಸವಾಲು_ಇತರೆ_ವಕೀಲರಿಂದಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.